ಮೂಲ ದಾವಾ ನಂಃ 24/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **23.08.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪ್ರತಿವಾದಿಯರ ಪರ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ತಂಗಿ , 2 ನೇ ಪ್ರತಿವಾದಿ ಆಕೆಯ ಗಂಡನಾಗಿದ್ದು , 3 ನೇ ಪ್ರತಿವಾದಿ ಅವರ ಮಗಳಾಗಿರುತ್ತಾಳೆ. ಸುಮಾರು ವರ್ಷಗಳಿಂದ ನಮ್ಮ ಮಧ್ಯ ಸಿವಿಲ್ ವ್ಯಾಜ್ಯಗಳು ನಡೆಯುತ್ತಿವೆ ಎಂದರೆ , ಸಾಕ್ಷಿಯ ನಾವು ಮಸ್ಕತ್‌ನಿಂದ 2018 ರಲ್ಲಿ ವಾಪಸ್ಸು ಮುಂಡಗೋಡಗೆ ಬಂದ ನಂತರ ಸಿವಿಲ್ ವ್ಯಾಜ್ಯಗಳು ನಡೆಯುತ್ತಿವೆ ಎಂದು ನುಡಿಯುತ್ತಾರೆ. ನಾವು ಮಸ್ಕತನಿಂದ ಬಂದ ನಂತರ, ಸಿವಿಲ್ ವ್ಯಾಜ್ಯಗಳು ಹುಟ್ಟುಹಾಕಿರುತ್ತೀರಾ ಎಂರದೆ , ನಾವು ಹುಟ್ಟುಹಾಕಿರುವುದಿಲ್ಲ ಎಂದು ನುಡಿಯುತ್ತಾರೆ.

ಯಲ್ಲಾಪುರ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಮ್ಮ ಕುಟುಂಬದವರ ಮಧ್ಯ 2006 ರಿಂದ ಸಿವಿಲ್ ವ್ಯಾಜ್ಯಗಳು ನಡೆಯುತ್ತಿವೆ ಎಂದರೆ , ಸಾಕ್ಷಿಯು ನಮ್ಮ ಮತ್ತು ಪ್ರತಿವಾದಿ ಮಧ್ಯ ಅಲ್ಲ ನಮ್ಮ ಕುಟುಂಬದ ಮಧ್ಯ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ನಾನು ದಾಖಲು ಮಾಡಿದ್ದೆ ಎಂದರೆ , ನಮ್ಮ ತಾಯಿಯವರು ದಾಖಲು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಮತ್ತು ಪ್ರತಿವಾದಿಯರು ಒಂದೇ ಪಾರ್ಟಿ ಆಗಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಗಂಡನಿಗೆ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಹುಟ್ಟುಹಾಕುವ ರೂಡಿಯಾಗಿದೆ ಎಂದರೆ ಸರಿಯಲ್ಲ. ಈ ದಾವೆಯನ್ನೂ ಸಹಿತ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೇಳಲು ನನಗೆ ಹಕ್ಕಾಗಲೀ ಅಧಿಕಾರವಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ಪ್ರತಿವಾದಿಯರು ಮೂಲ ದಾವಾ ನಂಬರ್ 39/2019 ನೇದನ್ನು ನಮ್ಮ ವಿರುದ್ಧ ದಾಖಲು ಮಾಡಿದ್ದು , ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಹೌದು. ಯಾವ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾಖಲು ಮಾಡಲಾಗಿದೆ ಎಂದರೆ, ಸಾಕ್ಷಿಯು ನಾನು ವಾಸ ಮಾಡುತ್ತಿರುವ ಮನೆಗೆ ಸಂಬಂಧಿಸಿದಂತೆ ಈ ದಾವೆಯನ್ನು ದಾಖಲು ಮಾಡಲಾಗಿದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**